5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲ್ಯೂ 01
ಸಿಡಬ್ಲ್ಯೂ 01

| | | |
|---|---|---|
| ಸಾಕ್ಷಿ ಹೆಸರು | - | ಚೇತನ್ |
| ತಂದೆ ಹೆಸರು | - | ಗಣಪತಿ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸಾರೇಕೊಪ್ಪ, ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕಃ 22-07-2022.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಚಾಸಾ-2 ನನ್ನ ತಮ್ಮ. ನನಗೆ ಚಾಸಾ-3 ರಿಂದ ಚಾಸಾ 5 , ಚಾಸಾ-10 ಮತ್ತು ಚಾಸಾ-11 ರವರ ಪರಿಚಯ ಇದೆ. ಚಾಸಾ 6 ನನ್ನ ತಮ್ಮನ ಹೆಂಡತಿ . ಚಾಸಾ-7 ನನ್ನ ಮಾವ , ಚಾಸಾ-8 ನನ್ನ ತಂದೆ, ಚಾಸಾ- 9 ನನ್ನ ತಾಯಿ. ನನಗೆ ಆರೋಪಿತರ ಪರಿಚಯ ಇರುತ್ತದೆ.

ನಾನು ಸೊರಬ ತಾಲ್ಲೂಕು, ಸಾರೇಕೊಪ್ಪ ಗ್ರಾಮದಲ್ಲಿ ವಾಸ ಇದ್ದು ವ್ಯವಸಾಯ ಕೆಲಸ ಮಾಡುತ್ತೇನೆ. ಮೊದಲು ಜೆ ಸಿ ಬಿ ಮತ್ತು ಟ್ರಾಕ್ಟರ್ ನ್ನು ಬಾಡಿಗೆಗೆ ಕೊಡುತ್ತಿದ್ದೆನು. ಸಾರೇಕೊಪ್ಪ ಗ್ರಾಮದ ಖಾನೆ ಷುಮಾರಿ ನಂಬರ್ ನಲ್ಲಿ ನಮ್ಮ ಮನೆಯ ಹತ್ತಿರ ಒಂದು ಎಕರೆ ಜಾಗದಲ್ಲಿ ಬಾಳೆ ಮತ್ತು ಅಡಿಕೆ ತೋಟವನ್ನು ಮಾಡಿರುತ್ತೇನೆ. ಸದರಿ ತೋಟಕ್ಕೆ ಮೊದಲು ಸಣ್ಣ ಬೇಲಿ ಇತ್ತು. ಸದರಿ ತೋಟಕ್ಕೆ ಹಳೆ ಬೇಲಿಯನ್ನು ತೆಗೆದು ತಂತಿ ಬೇಲಿಯನ್ನು ಹಾಕಿರುತ್ತೇನೆ. ನಮ್ಮ ಜಮೀನಿನ ಪಕ್ಕದಲ್ಲಿ 1 ಮತ್ತು 2 ನೇ ಆರೋಪಿತರ ಮನೆ ಮತ್ತು ತೋಟ ಇರುತ್ತದೆ. ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಿಗೆ ಸೇರಿದ ದನ ಕರುಗಳು ಬಂದು ನಮ್ಮ ತೋಟವನ್ನು ಹಾಳು ಮಾಡಿದ್ದವು . ಈ ಬಗ್ಗೆ ನಾವು 1 ಮತ್ತು 2 ನೇ ಆರೋಪಿತರಿಗೆ ನಿಮ್ಮ ದನ ಕರುಗಳನ್ನು ಬಿಡಬೇಡಿ ನಮ್ಮ ತೋಟವನ್ನು ಹಾಳು ಮಾಡುತ್ತವೆ ಎಂದು ಹೇಳಿರುತ್ತೇವೆ. ಆ

ಸಮಯದಲ್ಲಿ ಆರೋಪಿತರು ನಮ್ಮಜೊತೆಗೆ ಜಗಳಕ್ಕೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆ ದಿನ ನಾವು ಏನೂ ಹೇಳದೇ ವಾಪಾಸ್ ಹೋಗಿರುತ್ತೇವೆ.

ದಿನಾಂಕಃ09-06-2019 ರಂದು ನಾನು ಮತ್ತು ನನ್ನ ತಮ್ಮ ಚಾಸಾ-2 ಪಕ್ಕದ ಊರಿಗೆ ಜೆ ಸಿ ಬಿ ಮತ್ತು ಟ್ರಾಕ್ಟರ್ ಬಾಡಿಗೆಗೆ ಹೋಗಿದ್ದೆವು. ನಾವು ಹೊರಗೆ ಕೆಲಸಕ್ಕೆ ಹೋಗಿದ್ದಾಗ 1 ಮತ್ತು 2 ನೇ ಆರೋಪಿತರು ನಮ್ಮ ತೋಟಕ್ಕೆ ಮತ್ತು ತೋಟದ ಬೇಲಿಗೆ ಬೆಂಕಿ ಹಾಕಿದ್ದರು. ಇದರಿಂದ ನಮ್ಮ ತೋಟದಲ್ಲಿರುವ ಸುಮಾರು 30-40 ಅಡಿಕೆ ಮತ್ತು ಬಾಳೆ ಗಿಡಗಳು ಸುಟ್ಟುಹೋಗಿದ್ದವು. ಆಗ ನಾನು ಮತ್ತು ಚಾಸಾ-2 ರವರು ಸೇರಿ 1 ಮತ್ತು 2 ನೇ ಆರೋಪಿತರನ್ನು ಸದರಿ ವಿಚಾರವನ್ನು ಕೇಳಲು ಅವರ ಮನೆಗೆ ಹೊರಟಾಗ ನಮ್ಮ ಗ್ರಾಮದ ಹುಣಸೆಕೊಪ್ಪದ ಮಂಜುನಾಥ ಇವರ ಮನೆಯ ಎದುರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಮಳ್ಳಿ ರಾಜಪ್ಪ ಮತ್ತು ಅವರ ಕುಟುಂಬದವರು ಹಾಗೂ 2 ರಿಂದ 9 ನೇ ಆರೋಪಿತರಾದ ಪರಸಪ್ಪ , ರಮೇಶ, ಲಕ್ಷ್ಮಣ, ನಿಂಗರಾಜ, ಟಾಕಪ್ಪ , ಅಣ್ಣಪ್ಪ , ಕೃಷ್ಣಪ್ಪ , ಲೋಕೇಶ ಒಟ್ಟು 9 ಜನ ಗಲಾಟೆ ಮಾಡುವ ಉದ್ದೇಶದಿಂದ ಕಾಡು ಕಲ್ಲುಗಳು , ದೊಣ್ಣೆಯಿಂದ ಹಲ್ಲೆ ಮಾಡುವ ಉದ್ದೇಶದಿಂದ ರಸ್ತೆಯಲ್ಲಿ ಹೋಗುತ್ತಿದ್ದ ನಮ್ಮನ್ನು ತಡೆದು ಸೂಳೇಮಕ್ಕಳಾ, ಬೋಳಿ ಮಕ್ಕಳಾ ನಮ್ಮನ್ನು ಎದುರು ಹಾಕಿಕೊಂಡರೆ ನೀವು ಬದುಕಲು ಸಾಧ್ಯನ ಎಂದು ನಮಗೆ ಮತ್ತು ನಮ್ಮ ತಾಯಿಗೆ ಬೈದಿರುತ್ತಾರೆ. ನಮ್ಮ ಮಳ್ಳಿ ಮನೆತನದವರನ್ನು ಎದುರು ಹಾಕಿಕೊಂಡು ಊರಿನಲ್ಲಿ ನಿಮಗೆ ಬದುಕಲು ಬಿಡುವುದಿಲ್ಲ ಎಂದು ನಮ್ಮ ಮೇಲೆ ಹಲ್ಲೆ ಮಾಡಲು ಶುರು ಮಾಡಿದರು.

3 ನೇ ಆರೋಪಿಯು ಕಾಡು ಜಾತಿಯ ಕಲ್ಲಿನಿಂದ ಚಾಸಾ-2 ರವರ ತಲೆಗೆ ಹೊಡೆದಿರುತ್ತಾನೆ, ಚಾಸಾ-2 ರವರಿಗೆ ತಲೆಗೆ ಗಾಯವಾಗಿ ಕೆಳಗೆ ಬಿದ್ದಿರುತ್ತಾನೆ. 4 ನೇ ಆರೋಪಿಯು ನನ್ನ ಎರಡೂ ಕೈಗಳನ್ನು ಹಿಡಿದುಕೊಂಡು 5 ನೇ ಆರೋಪಿ ನನ್ನ ಕುತ್ತಿಗೆ ಹಿಡಿದುಕೊಂಡಿದ್ದ, 6 ನೇ ಆರೋಪಿಯು ನನ್ನ ತಲೆಗೆ ರೀಪರ್ ನಿಂದ ಹಿಂದಿನಿಂದ ಹೊಡೆದಿರುತ್ತಾನೆ. ಆಗ ನನ್ನ ತಲೆಗೆ ಏಟಾಗಿ ಕೆಳಗೆ ಬಿದ್ದಿರುತ್ತೇನೆ. ನಂತರ 7 ನೇ ಆರೋಪಿಯು ಎರಡು ಮುಷ್ಟಿ ಗಾತ್ರದ ಕಲ್ಲಿನಿಂದ ನನ್ನ ತಲೆಯ ಬಲಭಾಗಕ್ಕೆ ಹೊಡೆದಿರುತ್ತಾನೆ, ಇದರಿಂದ ನನಗೆ ರಕ್ತಗಾಯಗಳಾಗಿರುತ್ತದೆ.

ನಂತರ ಉಳಿದ ಆರೋಪಿತರು ಎಲ್ಲರೂ ನಮ್ಮನ್ನು ಕಾಲಿನಿಂದ ಒದೆಯಲು ಮತ್ತು ತುಳಿಯುವುದಕ್ಕೆ ಶುರು ಮಾಡಿದರು. ನಂತರ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆ ಸಮಯದಲ್ಲಿ ಚಾಸಾ- 5 ಮತ್ತು ಚಾಸಾ-11 ರವರು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿತರು ಹೋಗುವಾಗ ನಮ್ಮನ್ನು ಎದುರು ಹಾಕಿಕೊಂಡು ನಮ್ಮ ಊರಿನಲ್ಲಿ ಹೇಗೆ ಬದುಕುತ್ತೀರಾ ನೋಡುತ್ತೇವೆ ಎಂದು ಜೀವ ಬೆದರಿಕೆ ಹಾಕಿ ಹೋಗಿರುತ್ತಾರೆ. ಹೋಗುವಾಗ ಅವರು ಕೃತ್ಯಕ್ಕೆ ಉಪಯೋಗಿಸಿದ ಕಲ್ಲು , ದೊಣ್ಣೆಗಳನ್ನು ಅಲ್ಲೇ ಬಿಸಾಕಿ ಹೋಗಿರುತ್ತಾರೆ.

ನಂತರ 108 ಅಂಬ್ಯುಲೆನ್ಸ್ ವಾಹನದಲ್ಲಿ ನಾನು ಮತ್ತು ನನ್ನ ತಮ್ಮ ಚಾಸಾ-2 ರವರು ಸೊರಬ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲಾಗಿರುತ್ತೇವೆ. ನಂತರ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದಾಗ ಸಾಯಂಕಾಲ 7-30 ಗಂಟೆ ಆಗಿತ್ತು.

ನಾನು ಮತ್ತು ಚಾಸಾ-2 ರವರು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ದಿನಾಂಕ:10-06-2019 ರಂದು ಸೊರಬ ಪೋಲೀಸರು ಸದರಿ ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ -1(ಎ) ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ 4 ದಿನದ ನಂತರ ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಲು ಬಂದಿದ್ದರು. ನಿಖರವಾದ ತಾರೀಖು ನನಗೆ ನೆನಪಿಲ್ಲ. ಆ ಸಮಯದಲ್ಲಿ ನಾನು, ಚಾಸಾ-3 ಮತ್ತು ಚಾಸಾ-4 ರವರು ಇದ್ದೆವು. ಗಲಾಟೆಯಾದ ಜಾಗವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ. ಸ್ಥಳದಲ್ಲಿ 2 ಕಲ್ಲುಗಳು , ಒಂದು ರೀಪರ್ ತುಂಡು ಇದ್ದವು. ಆರೋಪಿತರು ನನಗೆ ರೀಪರ್ ನಿಂದ ಮತ್ತು 2 ಮುಷ್ಟಿ ಗಾತ್ರದ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಮತ್ತು ನನ್ನ ತಮ್ಮ ಚಾಸಾ-2 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಪೋಲೀಸರಿಗೆ ತೋಸಿರುತ್ತೇನೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳ ಪಂಚನಾಮೆಯನ್ನು ನಿಪಿ -2 ಎಂದು

, ಸಾಕ್ಷಿಯ ಸಹಿಯನ್ನು ನಿಪಿ -2(ಎ) ಎಂದು ಗುರುತಿಸಲಾಯಿತು. ನಿಪಿ -2 ನ್ನು ಸಂಜೆ 4 ರಿಂದ 5-30 ಗಂಟೆ ವರೆಗೆ ಮಾಡಿರುತ್ತಾರೆ. ನಿಪಿ -2 ಕ್ಕೆ ನಾನಲ್ಲದೇ ಚಸಾ-3 ರಿಂದ ಚಸಾ-5 ರವರು ಸಹ ಸಹಿ ಮಾಡಿರುತ್ತಾರೆ.

ನಿಪಿ -2 ರ ಕಾಲಕ್ಕೆ ಪೋಲೀಸರು ಸ್ಥಳದಲ್ಲಿ ಎರಡು ಫೋಟೋ ತೆಗೆದಿರುತ್ತಾರೆ. ಸದರಿ 2 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ -3 ಮತ್ತು ನಿಪಿ -4 ಎಂದು ಗುರುತಿಸಲಾಯಿತು.

ಆರೋಪಿತರು ಆ ದಿನ ಕೃತ್ಯಕ್ಕೆ ಉಪಯೋಗಿಸಿದ ಕಾಡು ಜಾತಿಯ 2 ಕಲ್ಲುಗಳು ಮತ್ತು ರೀಪರ್ ನ್ನು ನೋಡಿದರೆ ಗುರುತಿಸುತ್ತೇನೆ. ಪೋಲೀಸರು ನಿಪಿ -2 ರ ಸಮಯದಲ್ಲಿ ವಶಪಡಿಸಿಕೊಂಡ ಒಂದು ಕಾಡು ಜಾತಿಯ ಎರಡು ಹಿಡಿ ಗಾತ್ರದ ತ್ರೀಕೋನಾಕಾರದ ಕಾಡು ಜಾತಿಯ ಕಲ್ಲು ಮು ಮಾ -1, ಕಾಡು ಜಾತಿಯ ಮುಷ್ಟಿಗಾತ್ರದ ಕಲ್ಲು ಮು ಮಾ 2 ಮತ್ತು ರೀಪರ್ ನ್ನು ಮು ಮಾ -3 ಎಂದು ಗುರುತಿಸಲಾಯಿತು.

ನಂತರ 25-06-2019 ರಂದು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಅದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಸದರಿ ಆಸ್ಪತ್ರೆಯಿಂದ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ. ನಂತರ ಸದರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆದುಕೊಂಡು ಬಂದಿರುತ್ತೇವೆ. ಚಾಸಾ-2 ರವರು ಡಿಸ್ಚಾರ್ಜ್ ಮಾಡಿದಾಗ ಉಸಿರಾಡುತ್ತಿದ್ದ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. 4 ದಿನಗಳ ನಂತರ ಚಾಸಾ-2 ರವರು ನಮ್ಮ ಮನೆಯಲ್ಲಿ ಕೋಮಾ ಸ್ಟೇಜ್ ಗೆ ಹೋಗಿರುತ್ತಾನೆ. ಆಗ ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಹೃದಯಾಲಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇವೆ. ಪುನಃ 2 ದಿನಗಳ ನಂತರ ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ಚಾಸಾ-2 ರವರಿಗೆ ವೈದ್ಯರು ಚಿಕಿತ್ಸೆ ನೀಡಿದ ನಂತರ ಚೇತರಿಸಿಕೊಂಡಿರುತ್ತಾನೆ, ಅದರೆ ಆತನು ಬಲಗೈ , ಬಲಗಾಲು ಸ್ವಾಧೀನ ಕಳೆದುಕೊಂಡಿರುತ್ತಾನೆ, ಮಾತು ನಿಂತು ಹೋಗಿರುತ್ತದೆ. ಆರೋಪಿತರು ನನ್ನನ್ನು ಮತ್ತು ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ . ದಿನಾಂಕಃ28-06-2019 ರಂದು ಪೋಲೀಸರ ಮುಂದೆ ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ.

ದಿನಾಂಕಃ10-08-2019 ರಂದು ಸೊರಬ ಪೊಲೀಸ್ ಠಾಣೆಯ ಸಿ ಪಿ ಐ ಉಮಾಪತಿ ರವರು, ಪಿ ಎಸ್ ಐ ಮತ್ತು ಪಿ.ಸಿ. ಗಳು ಸಾರೇಕೊಪ್ಪ ಗ್ರಾಮದಲ್ಲಿರುವ ನಮ್ಮ ಮನೆಗೆ ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಳ್ಳಲು ಬಂದಿದ್ದರು. ಆಗ ನನ್ನ ತಮ್ಮ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ. ಪೋಲೀಸರು ನನ್ನ ತಮ್ಮ ಚಾಸಾ-2 ರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇಲ್ಲದೇ ಇರುವ ಬಗ್ಗೆ ಫೋಟೋಗಳನ್ನು ತೆಗೆದು ವೀಡೀಯೋ ರೆಕಾರ್ಡ್ ಮಾಡಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ -5 ಮತ್ತು 6 ಎಂದು ಗುರುತಿಸಲಾಯಿತು.

ನಂತರ ದಿನಾಂಕಃ04-04-2020 ರಂದು ನಾನು ಸೊರಬ ಪೋಲೀಸ್ ಠಾಣೆಗೆ ಹೋಗಿ ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ-2 ರವರು ಈಗಲೂ ಸಹ ಮಾತನಾಡುವ ಸ್ಥಿತಿಯಲ್ಲಿ ಇರುವುದಿಲ್ಲ ಮತ್ತು ಬಲಗೈ ಮತ್ತು ಬಲಗಾಲು ಸ್ವಾಧೀನ ಇರುವುದಿಲ್ಲ. ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿಯು ಅವರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

( ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).